ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ ಉಪ ವಿಭಾಗ,
ತುಮಕೂರು-572101.

ಸಂಖ್ಯೆ:ಸಕಾನಿಇಂ/ಲೋಇ/ಉವಿ/ತುಮ/ಶಾಲಾ/ಕಟ್ಟಡ/ಸುರಕ್ಷತೆ/1294 /2025-26 ದಿನಾಂಕ: 10/7/2-25

ರವರಿಗೆ-
ಕಾರ್ಯದರ್ಶಿಗಳು,
ಮಾರುತಿ ವಿದ್ಯಾ ಕೇಂದ್ರ
ಬೆಳಗುಂಬ, ತುಮಕೂರು

ಮಾನ್ಯರೆ,

ವಿಷಯ:- ಮಾರುತಿ ವಿದ್ಯಾ ಕೇಂದ್ರ (ಬ್ಲಾಕ್-1 ಪ್ರೈಮರಿ ಸ್ಕೂಲ್ ಕಟ್ಟಡ)ಬೆಳಗುಂಬ ತುಮಕೂರು ತಾಲ್ಲೂಕು ಶಾಲಾಕಟ್ಟಡಗಳ Structural Stability ಪ್ರಮಾಣ ಪತ್ರವನ್ನು ನವೀಕರಿಸಿಕೊಡುವ ಬಗ್ಗೆ.

ಉಲ್ಲೇಖ:-1]ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸಸೌಧ ಬೆಂಗಳೂರುರವರ ಸುತ್ತೋಲೆ ಸಂ: ಲೋಇ/59 /ಬಿಇಡಿ/2019 ದಿ: 07-05-2022.

2]ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸಸೌಧ ಬೆಂಗಳೂರುರವರ ಸುತ್ತೋಲೆ ಸಂ: ಲೋಇ/59 /ಬಿಇಡಿ/2019 ದಿನಾಂಕ: 25-09-2024

3]ತಮ್ಮ ಮನವಿ ಪತ್ರದ ದಿನಾಂಕ: 05-07-2025

4]ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಡಿ.ಡಿ. ನಂಬರ್:854551 ದಿನಾಂಕ: 11-07-2025 ಮೊತ್ತ ರೂ 1000/- (ರೂ ಒಂದು ಸಾವಿರ ಮಾತ್ರ)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯದರ್ಶಿ, ಮಾರುತಿ ವಿದ್ಯಾ ಕೇಂದ್ರ, (ಬ್ಲಾಕ್-1 ಪ್ರೈಮರಿ ಸ್ಕೂಲ್ ಕಟ್ಟಡ) ಬೆಳಗುಂಬ ತುಮಕೂರು ತಾಲ್ಲೂಕು ಶಾಲಾಕಟ್ಟಡಗಳ Structural Stability ಪ್ರಮಾಣ ಪತ್ರವನ್ನು ನವೀಕರಿಸಿಕೊಡಲು ಉಲ್ಲೇಖಿತ (4) ರ ಪತ್ರದಲ್ಲಿ ಮನವಿ ಸಲ್ಲಿಸಿರುತ್ತಾರೆ.

ಆದರಂತೆ, ಮಾರುತಿ ವಿದ್ಯಾ ಕೇಂದ್ರ, (ಬ್ಲಾಕ್-1 ಪ್ರೈಮರಿ ಸ್ಕೂಲ್ ಕಟ್ಟಡ) ಬೆಳಗುಂಬ ತುಮಕೂರು ತಾಲ್ಲೂಕು ಶಾಲೆಗೆ ದಿನಾಂಕ: 10-07-2025 ರಂದು, ಭೇಟಿ ನೀಡಿ ಪ್ರಾಂಶುಪಾಲರು ಮತ್ತು ಮುಖ್ಯೋಪಾಧ್ಯಾಯರವರೊಂದಿಗೆ ಕಟ್ಟಡವನ್ನು ಪರಿವೀಕ್ಷಣೆ ಮಾಡಲಾಗಿದೆ. ಈ ಶಾಲೆಯ ಆವರಣದಲ್ಲಿ ಬ್ಲಾಕ್-1ರ ನೆಲಮಹಡಿಯಲ್ಲಿ 10 ಕೊಠಡಿಗಳು, 01 ಕಛೇರಿ ರೂಂ, ಗಂಡು ಮಕ್ಕಳಿಗೆ 06 ಯೂರಿನರ್ಸ್, 06 ಶೌಚಾಲಯ, ಹಾಗೂ ಹೆಣ್ಣು ಮಕ್ಕಳಿಗೆ 06 ಶೌಚಾಲಯಗಳಿರುತ್ತವೆ. ಮೊದಲನೇ ಅಂತಸ್ತಿನಲ್ಲಿ 10 ಕೊಠಡಿಗಳು, 01 ಕಛೇರಿ ರೂಂ, ಗಂಡು ಮಕ್ಕಳಿಗೆ 06 ಯೂರಿನರ್ಸ್, 06 ಶೌಚಾಲಯ, ಹಾಗೂ ಹೆಣ್ಣು ಮಕ್ಕಳಿಗೆ 06 ಶೌಚಾಲಯಗಳಿರುತ್ತವೆ. ಸದರಿ ಶಾಲಾ ಕಟ್ಟಡವನ್ನು 2022-23ನೇ ಸಾಲಿನ ದಿನಾಂಕ: 22-06-2022ರಂದು ಗ್ರಾಮ ಪಂಚಾಯಿತಿ ಲೈಸೆನ್ಸ್ ಪಡೆದು ಶಾಲಾ ಕಟ್ಟಡವನ್ನು ನಿರ್ಮಿಸಿರುತ್ತಾರೆ.

ಸದರಿ ಶಾಲೆಯು ತುಮಕೂರು-ಊರ್ಡಿಗೆರೆ ಜಿಲ್ಲಾ ಮುಖ್ಯ ರಸ್ತೆಯ ಬಲಭಾಗದಲ್ಲಿ ಸರಪಳಿ: 4.55 ಕಿ.ಮೀ ನಲ್ಲಿ ಬರುತ್ತಿದ್ದು, ಮೇಲ್ಕಂಡ ಕಟ್ಟಡಗವನ್ನು ಆರ್.ಸಿ.ಸಿ ಕಾಲಂಗಳನ್ನು ಅಳವಡಿಸಿ ಆರ್.ಸಿ.ಸಿ ಛಾವಣಿಯನ್ನು ನಿರ್ಮಿಸಿ ಇಟ್ಟಿಗೆ ಕಟ್ಟಡದ ಗೋಡೆಗಳನ್ನು ನಿರ್ಮಿಸಿರುತ್ತಾರೆ.

ಮುಂದುವರೆದು, Sree Tech Supports Civil Engineering Consultancy & Laboratories, Banglore ರವರು ಕಟ್ಟಡದ NDT ಪರೀಕ್ಷೆಯನ್ನು ಕೈಗೊಂಡಿದ್ದು ಪರೀಕ್ಷಾ ವರದಿಗಳನ್ನು ತಯಾರಿಸಿರುತ್ತಾರೆ. ಸದರಿ ಪರೀಕ್ಷಾ ವರದಿಗಳನ್ನು ಡಾ॥ಎನ್.ಜಯರಾಮಪ್ಪ, ಪ್ರೋಫೇಸರ್ ಯು.ವಿ.ಸಿ.ಇ ಬೆಂಗಳೂರುರವರಿಂದ ದಿನಾಂಕ:04-02-2024 ಮತ್ತು 05-02-2024 ರಂದು ಪರಿವೀಕ್ಷಣೆಗೆ ಒಳಪಡಿಸಿ ಶಾಲೆಯನ್ನು ನಡೆಸಲು ಕಟ್ಟಡ ಸಧೃಡತೆಯಿಂದ ಇರುವುದರ ಬಗ್ಗೆ ವರದಿ ನೀಡಿರುತ್ತಾರೆ. ಸದರಿ ಪರೀಕ್ಷಾ ವರದಿಯಲ್ಲಿ "The Building is stable (Concrete structure such as RCC Columns, Roof & Beams) as per Volume – 1 of National Building Code of India – 2016 ಎಂದು

ಧೃಢೀಕರಿಸಿರುತ್ತಾರೆ. ಹಾಗೂ ಕಟ್ಟಡದಲ್ಲಿ ಕಂಡುಬಂದಿರುವ ಬಿರುಕುಗಳನ್ನು Crack Sealant or Grouting material ಉಪಯೋಗಿಸಿ ಸರಿಪಡಿಸುವುದು, Dampness ಅನ್ನು ಸರಿಪಡಿಸುವುದು ಸೇರಿದಂತೆ ಇನ್ನಿತರೆ ಸಲಹೆಗಳನ್ನು ನೀಡಿರುತ್ತಾರೆ.

ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2) ರಲ್ಲಿ ಸೂಚಿಸಿರುವಂತೆ ಗ್ರಾಮೀಣ ಪ್ರದೇಶದಲ್ಲಿ ಒಂದು ಶಾಲೆಗೆ ರೂ 1,000/- ಗಳನ್ನು ಶುಲ್ಕವಾಗಿ ಪಾವತಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯವರು ಉಲ್ಲೇಖ (5) ರಲ್ಲಿ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಡಿ.ಡಿ. ನಂಬರ್:854551 ದಿನಾಂಕ: 11-07-2025ರಲ್ಲಿ ಈ ಕಛೇರಿಗೆ ಶಾಲೆಯ ಶುಲ್ಕ 1,000/- ರೂಗಳನ್ನು ಪಾವತಿಸಿರುತ್ತಾರೆ.

ಸದರಿ ವಿದ್ಯಾ ಕೇಂದ್ರ ಬ್ಲಾಕ್-1 ಕಟ್ಟಡವನ್ನು ಪರಿಶೀಲಿಸಲಾಗಿ, ಗೋಡೆಗಳಲ್ಲಿ ಅಲ್ಲಲ್ಲಿ ಸಣ್ಣ ಬಿರುಕುಗಳು ಕಂಡು ಬಂದಿದ್ದು ಅವುಗಳನ್ನು ಸರಿಪಡಿಸುವುದು, ಕಟ್ಟಡಕ್ಕೆ ಬಣ್ಣ ಬಳಿಯುವುದು, ಕಟ್ಟಡದ ನಿರ್ವಹಣೆ ಜವಾಬ್ದಾರಿಯು ಸದರಿ ವಿದ್ಯಾ ಸಂಸ್ಥೆಯವರದಾಗಿರುತ್ತದೆ. ಹಾಗೂ ಈ ನವೀಕರಣ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ನಾವು ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

ಮುಂದಿನ ದಿನಗಳಲ್ಲಿ ಕಟ್ಟಡದಲ್ಲಿ ಯಾವುದಾದರೂ ಬದಲಾವಣೆ ಅಥವಾ ಹೆಚ್ಚುವರಿಯಾಗಿ ನಿರ್ಮಾಣ ಮಾಡಿದಲ್ಲಿ ಸದರಿ ನವೀಕರಣ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದು. ಆದ್ದರಿಂದ ಸದರಿ ನವೀಕರಣ ಪ್ರಮಾಣ ಪತ್ರವನ್ನು ಮಾರುತಿ ವಿದ್ಯಾ ಕೇಂದ್ರ (ಬ್ಲಾಕ್-1 ಪ್ರೈಮರಿ ಸ್ಕೂಲ್ ಕಟ್ಟಡ)ಬೆಳಗುಂಬ ತುಮಕೂರು ತಾಲ್ಲೂಕು ಇಲ್ಲಿನ ಶಾಲಾ ಕಟ್ಟಡಕ್ಕೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ, Sree Tech Supports Civil Engineering Consultancy & Laboratories, Banglore ಹಾಗೂ ಡಾ॥ ಎನ್.ಜಯರಾಮಪ್ಪ, ಪ್ರೊಫೇಸರ್ ಯು.ವಿ.ಸಿ.ಇ ಬೆಂಗಳೂರು ರವರಿಂದ ನೀಡಿರುವ ಪರೀಕ್ಷಾ ವರದಿಗಳನ್ವಯ ಹಾಗೂ ನೀಡಿರುವ ಸಲಹೆಗಳ ಷರತ್ತಿಗೆ ಒಳಪಟ್ಟು ಶಾಲಾ ಕಟ್ಟಡಕ್ಕೆ ಉಲ್ಲೇಖ (2) ರ ಪತ್ರದಂತೆ ದಿನಾಂಕ: 11-07-2025 ರಿಂದ ದಿನಾಂಕ 10-07-2027 ರವರೆಗೆ 02 ವರ್ಷಗಳ (ಎರಡು ವರ್ಷಗಳು) ಅವಧಿಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ನವೀಕರಣಗೊಳಿಸಿ ಷರತ್ತಿಗೊಳಪಟ್ಟು ನೀಡಲಾಗಿದೆ.

ತಮ್ಮ ವಿಶ್ವಾಸಿ,

Ravi. N. K

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ಉಪವಿಭಾಗ,
ತುಮಕೂರು.